ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಬಾಗಲಕೋಟೆ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದಾಗಿರುವ ಹಾನಿ

ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನ ಸಭೆಯಿಂದಚುನಾಯಿತರಾದವರು) :-

232 (207) ಮಾನ್ಯಕಂದಾಯ ಸಚಿವರು ಈ ವಿಷಯಗಳÀನ್ನು ದಯವಿಟ್ಟು ತಿಳಿಸುವರೇ:-

(ಅ) ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಜುಲೈ ಮತ್ತು ಆಗಸ್ಟ್ 2019ರ ತಿಂಗಳಿನಲ್ಲಿ ಬಿದ್ದ ಮಹಾಮಳೆ ಹಾಗೂ ನೆರೆ ಹಾವಳಿಯಿಂದ ನದಿಯ ದಡದಲ್ಲಿರುವ ಗ್ರಾಮಗಳಿಗೆ ಸಾಕಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೆರೆ ಹಾವಳಿಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಗುಡಿ ಕೈಗಾರಿಕೆಗಳು, ಅತೀ ಸಣ್ಣ ಕೈಗಾರಿಕೆಗಳ ಚಟುವಟಿಕೆಗಳು ಅಸ್ತವ್ಯಸ್ಥಗೊಂಡು, ಕೈಗಾರಿಕಾ ಶೆಡ್‌ಗಳಲ್ಲಿನ ಯಂತ್ರೋಪಕರಣಗಳು, ಕಚ್ಚಾ ಸಾಮಗ್ರಿಗಳು ಹಾಗೂ ಸಿದ್ದ ಉತ್ಪನ್ನಗಳು, ಅಂಗಡಿ

ಮುಂಗಟ್ಟುಗಳು ಪೂರ್ಣ ಪ್ರಮಾಣದಲ್ಲಿ ಕೆಲವು ಕಡೆ ಭಾಗಶಃ ಹಾನಿಗೊಳಗಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಹಾನಿಗೆ ಒಳಗಾದ ನಷ್ಟದ ಅಂದಾಜು ಮೊತ್ತವೆಷ್ಟು ; (ವಿವರ ಒದಗಿಸುವುದು) ಹಾನಿಗೆ ಒಳಗಾದ ಕುಟುಂಬಸ್ಥರಿಗೆ ಈವರೆಗೆ ನೀಡಿರುವ ಪರಿಹಾರದ ಮೊತ್ತವೆಷ್ಟು ;

(ಈ) ಯಾವ ಮಾನದಂಡದ ಆಧಾರದ ಮೇಲೆ ಪರಿಹಾರ ಮೊತ್ತವನ್ನು ಪರಿಗಣಿಸಲಾಗುವುದು ;

(ಉ) ಪರಿಗಣಿಸದಿದ್ದಲ್ಲಿ, ಪರಿಗಣಿಸುವುದು ಯಾವಾಗ, ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?